ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಹೊಸ ಮುಖ್ಯಮಂತ್ರಿಗಳು

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ

ದಿನಾಂಕ : DATE : 30/07/2019

# ಬಿಎಸ್‌ವೈ ವಿಶ್ವಾಸಕ್ಕೆ ಒಲವು-ಗೆಲುವು

ಸಂ.ಕ. 30-7-19

## 'ದ್ವೇಷಕ್ಕೆ ಮುಂದಾಗಲಾರೆ। ಸ್ನೇಹಕ್ಕೆ ಹಿಂದೆಗೆಯಲಾರೆ'



ವಿಧಾನಸಭೆ ಅಧಿವೇಶನ ಕಲಾಪ ಆರಂಭಕ್ಕೂ ಪೂರ್ವದಲ್ಲಿ ನೂತನ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದರು.

ಸಂ.ಕ ಸಮಾಚಾರ ಬೆಂಗಳೂರು

ಕಳೆದೊಂದು ತಿಂಗಳಿನಿಂದ ನಡೆದಿದ್ದ ರಾಜಕೀಯ ಆಟಕ್ಕೆ ತೆರೆಬಿದ್ದಿದ್ದು, ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ನೇತೃತ್ವದ ಸರ್ಕಾರವು ಸೋಮವಾರ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ನಿರೀಕ್ಷೆಯಂತೆ ವಿಶ್ವಾಸಮತ ಸಾಬೀತುಪಡಿಸಿದೆ.

ಹದಿನೇಳು ಶಾಸಕರ ರಾಜೀನಾಮೆ ತದನಂತರದ ಅನರ್ಹತೆ ವಿದ್ಯಮಾನಗಳಿಂದ 208ಕ್ಕೆ ಕುಸಿತಗೊಂಡಿದ್ದ ವಿಧಾನಸಭೆಯಲ್ಲಿ ಬಿಜೆಪಿಯು 105 ಶಾಸಕರ ಬಲದೊಂದಿಗೆ ವಿಶ್ವಾಸಮತ ಸಾಬೀತುಪಡಿಸಿತು. ತನ್ಮೂಲಕ ಕಳೆದೊಂದು ತಿಂಗಳಿನಿಂದಲೂ ಸೃಷ್ಟಿಯಾಗಿದ್ದ ರಾಜಕೀಯ ಅಸ್ಥಿರತೆ ತೆರೆ ಕಂಡಂತಾಗಿದೆ

ಕಳೆದ ಗುರುವಾರ 4ನೇ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದ ಯಡಿಯೂರಪ್ಪ ಅವರಿಗೆ ರಾಜ್ಯಪಾಲ ವಿಆರ್ ವಾಲಾ ಒಂದು ವಾರದೊಳಗೆ ವಿಶ್ವಾಸಮತ ಸಾಬೀತುಪಡಿಸುವಂತೆ ಗಡುವು ನೀಡಿದ್ದ ಹಿನ್ನೆಲೆಯಲ್ಲಿ ಸೋಮವಾರ ವಿಧಾನಮಂಡಲ ಅಧಿವೇಶನ ಕರೆಯಲಾಗಿತ್ತು.

ರಾಜ್ಯಪಾಲರ ಸೂಚನೆಯಂತೆ ವಿಧಾನಸಭೆಯಲ್ಲಿ ಸರ್ಕಾರದ ಪರ ಯಡಿಯೂರಪ್ಪ ಮಂಡಿಸಿದ ವಿಶ್ವಾಸಮತವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು. ಜೊತೆಯಲ್ಲೇ 'ಧನ ವಿನಿಯೋಗ ವಿಧೇಯಕ' ಹಾಗೂ ಬಿಜೆಪಿ ಸರ್ಕಾರ ಹೊಸದಾಗಿ ಮಂಡಿಸಿದ ಪೂರಕ ಬಜೆಟ್‌ಗೂ ಸದನ ಅಂಗೀಕಾರ ನೀಡಿತು.

ಸದನದಲ್ಲಿ ಮಾತನಾಡಿದ ನೂತನ ಮುಖ್ಯಮಂತ್ರಿ ಯಡಿಯೂರಪ್ಪ ಯಾವುದೇ ಕಾರಣಕ್ಕೂ ದ್ವೇಷದ ರಾಜಕಾರಣ ಮಾಡುವುದಿಲ್ಲ. ವಿಪಕ್ಷ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವುದಾಗಿ ಹೇಳಿದರು. ಇದಕ್ಕೆ ಪ್ರತಿಯಾಗಿ ವಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿ ಜನಾದೇಶ ಇಲ್ಲದ ಸರ್ಕಾರವಿದು ಎಂದು ಟೀಕಿಸಿದರು. ಜೆಡಿಎಸ್ ಮುಖಂಡ ಕುಮಾರಸ್ವಾಮಿ ಮಾತನಾಡಿ ಕಳೆದ ಹದಿನಾಲ್ಕು ತಿಂಗಳಿನಿಂದಲೂ ಅಧಿಕಾರಕ್ಕೆ ಬರಲು ಹವಣಿಸುತ್ತಿದ್ದೀರಿ. ಅತೃಪ್ತ ಶಾಸಕರನ್ನು ಪಿಶಾಚಿಗಳನ್ನಾಗಿ ಮಾಡಿದ್ದೀರಿ ಎಂದು ವಾಗ್ದಾಳಿ ನಡೆಸಿದರು.

ವಿಶ್ವಾಸಮತ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆಯೇ ಸಭಾಧ್ಯಕ್ಷ ಸ್ಥಾನಕ್ಕೆ ರಮೇಶಕುಮಾರ್ ರಾಜೀನಾಮೆ ನೀಡಿದ್ದು, ಬುಧವಾರ ಹೊಸ ಸಭಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಬಿಜೆಪಿಯು ಮಾಜಿ ಸಭಾಧ್ಯಕ್ಷ ಬೋಪಯ್ಯ ಅವರನ್ನು ಸಭಾಧ್ಯಕ್ಷರ ಸ್ಥಾನಕ್ಕೆ ತರಲು ಒಲವು ತೋರಿದ್ದು, ಅವರ ಆಯ್ಕೆ ಬಹುತೇಕ ಖಚಿತವಾಗಿದೆ.

ಬಿಜೆಪಿ ಸರ್ಕಾರವು ಸದ್ಯಕ್ಕೆ ಸ್ಥಿರತೆ ಕಂಡುಕೊಂಡಿರುವುದರಿಂದ ಪಕ್ಷದ ವರಿಷ್ಠರು ಮಂತ್ರಿಮಂಡಲ ವಿಸ್ತರಣೆಗೆ ನಿರ್ಧರಿಸಿದ್ದಾರೆ. ಶುಕ್ರವಾರ ಸಂಪುಟ ವಿಸ್ತರಣೆ ಆಗುವ ನಿರೀಕ್ಷೆ ಇದ್ದು ಹತ್ತು ಸಚಿವರು ಮೊದಲ ಹಂತದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಹೇಳಲಾಗಿದೆ.

"ದ್ವೇಷ ರಾಜಕಾರಣ ಮಾಡೋಲ್ಲ. ವಿಪಕ್ಷವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುತ್ತೇನೆ.

। ಯಡಿಯೂರಪ್ಪ ಮುಖ್ಯಮಂತ್ರಿ

"ಯಡಿಯೂರಪ್ಪ ಅವರಿಗೆ ಅಭಿನಂದನೆ ಅಷ್ಟೆ. ಜನಾದೇಶವೇ ಇಲ್ಲದ ಸರ್ಕಾರವಿದು.

। ಸಿದ್ದರಾಮಯ್ಯ ಮಾಜಿ ಮುಖ್ಯಮಂತ್ರಿ

"ಸರ್ಕಾರ ನಡೆಸಿ ನೋಡೋಣ, ಸರ್ಕಾರ ಎಷ್ಟು ದಿನ ಇರುತ್ತೋ ನಾವೂ ನೋಡ್ತೀವಿ.

। ಕುಮಾರಸ್ವಾಮಿ ಮಾಜಿ ಮುಖ್ಯಮಂತ್ರಿ

4